## ಪದಬಂಧ



**ಎಡದಿಂದ ಬಲಕ್ಕೆ**

1. ಉತ್ತಮ ಅಭ್ಯಾಸ ಅಲ್ಲಿಯೂ ಇಲ್ಲಿಯೂ, ಎರಡೂ ಕಡೆ 3
3. ಚಿಣ್ಣರಿಗೆಲ್ಲ ಇಷ್ಟವಾಗದೆ ಬಿಡದು ಈ ಅಳಿಲು 3
4. ಕ್ಷೀಣ ಜ್ಯೋತಿ ಗೋಚರಿಸಿದ್ದು ಭೂಮಿ ಆಕಾಶ ಸೇರುವ ಸ್ಥಳ 3
6. ಎಲ್ಲಕ್ಕೂ ತಣ್ಣೀರು ಎರಚಿದಳು ಆ ಯುವತಿ 3
7. ಕೊಂಡವರಿಗೇ ಗೊತ್ತು, ಅದೊಂದು ವಿಶೇಷ ಪೆಟ್ಟಿಗೆ 4
9. ದಾನ ಪಡೆದಂತೆಲ್ಲ ಆವರಿಸಿತು ದುಡ್ಡಿನ ಬಾಯಾರಿಕೆ 4
11. ಅಮೃತಕ್ಕೇ ಕೈ ಹಾಕಿದಂತಿದೆ ಸುಂದರ ಸಾಗರ 4
13. ಮತ್ತೆ ಮತ್ತೆ ನೆತ್ತರಿನ ದಾನ ಮಾಡಿದವ ಶ್ರೇಷ್ಠ ಮನುಷ್ಯನೇ ಹೌದಲ್ಲ? 4
15. ದುಬಾರಿ ಬೆಲೆ ಹಾಕಿದರೂ ಎಲ್ಲವೂ ಖಾಲಿ ಖಾಲಿ 3
17. ಕಾದು ನಿಂತಿದ್ದವರಿಗೆಲ್ಲ ದೊರಕಿದ ವಸ್ತು ಕಪ್ಪು ಬಣ್ಣದ್ದು 3
18. ಬೆಲ್ಲಕ್ಕೆ ಆಸೆ ಪಟ್ಟವ ಎಳೇ ಹುಡುಗ 3
19. ವರಕವಿಯ ಮುದ್ದಿನ ಮಗಳು ಈಕೆ 3

**ಮೇಲಿನಿಂದ ಕೆಳಕ್ಕೆ**

1. ಚಿತ್ತ ಬಯಸಿದ ಎಲ್ಲವೂ ಅಲ್ಲಿ ಬಿಟ್ಟಿ ಸಿಕ್ಕೀತು 3
2. ಏಣಿಯೇ ಇಲ್ಲದೆ ಕ್ಷಣದಲ್ಲೇ ಇಳಿದಿದ್ದು ಎಂಥ ಮಾಯಾ ವಿದ್ಯೆ! 3
3. ಇಡೀ ಕೆಲಸಕ್ಕೆ ತಗುಲಿದ ವೆಚ್ಚದ ದುಪ್ಪಟ್ಟು 3
5. ವ್ಯಾಜ್ಯವನ್ನೇ ಹೂಡಲು ಹೊರಟಿದ್ದಾನೆ ಸೇವಕ 3
7. ಕೇಳಿದ್ದನ್ನು ತರಿಸು. ಆಮೇಲೆ ಒಟ್ಟಾಗಿಸಿ ಚೂರು ಮಾಡು 4
8. ಕಣ್ಣೀರಿಗೆ ಕರಗಿಹೋದ ನೋಡಿ, ಆತನ ಆಪ್ತ ಮಿತ್ರ 4
9. ಕಾದಾಟವನ್ನು ಕೈಬಿಟ್ಟು ಒಟ್ಟಾಗಿ ಕಾಪಾಡಿದ್ದು ಈ ನಿಬಿಡ ಅರಣ್ಯ 4
10. ಹೋಮ ನಡೆದಾಗ ನಾರಿಯರೆಲ್ಲ ಭಜಿಸಿದ್ದು ವಿಷ್ಣುವಿನ ಹೆಸರು 4
12. ದೃಢ ಕಂಕಣ ತೊಟ್ಟು ಗಳಿಸಿದ್ದು ಇಷ್ಟೆಲ್ಲ ಚಿನ್ನ 3
14. ಆ ಕಚೇರಿಯಲ್ಲಿ ನಡೆವ ಒಂದೊಂದು ಘಟನೆಯೂ ಆಸಕ್ತಿದಾಯಕ 3
15. ಬಂದೂಕದ ನೆರಳಿನಲ್ಲೇ ಸಾಗಿದೆ ಅವರ ಜೀವನ 3
16. ಆ ದಬರಿಯ ಬೆಲೆ ತುಂಬ ಹೆಚ್ಚು; ಎರಡು ಪಟ್ಟು ಆಗುವಷ್ಟು! 3

---

### 12–05–2022 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಭಾವ 3. ಸಂಧಾನ 4. ಜಳಕ 6. ಅನುರಕ್ತಿ 7. ಉದುರಿಸು 9. ನಲಿಗಾಲ 11. ವನವಾಸ 15. ಗಟಾರ 16. ಕಾನನ 17. ಕಲ್ಮಶ

**ಮೇಲಿನಿಂದ ಕೆಳಕ್ಕೆ**

1. ಅನಲ 2. ವಜನು 3. ಸಂಹಾರ 5. ಕರಿದು 6. ಅಧೀನ 8. ಸುಹಾಸ 10. ಗಾಣಿಗ 12. ನವೀನ13. ಮಾರಕ 14. ಪ್ರಕಾಶ

---

ಪ್ರಶ್ನಾಂಕಣ

# ಅಳಿಯಿತೇಕೆ ಅತ್ಯಂತ ದೈತ್ಯ ವಾನರ?

ಪ್ರಸ್ತುತ ಧರೆಯಲ್ಲಿರುವ ವಾನರ ವಿಧಗಳು ಐದು: ಗೊರಿಲ್ಲ, ಒರಾಂಗೋಟಾನ್, ಚಿಂಪಾಂಜಿ (ಕ್ರಮವಾಗಿ ಚಿತ್ರ 1, 2 ಮತ್ತು 3), ಬೋನೋಬೊ ಮತ್ತು ಗಿಬ್ಬನ್. ಇವುಗಳಲ್ಲೆಲ್ಲ ಗೊರಿಲ್ಲಗಳದೇ ಅತ್ಯಂತ ದೈತ್ಯ ಗಾತ್ರ. ವಯಸ್ಕ ಗಂಡು ಗೊರಿಲ್ಲಗಳು ಆರು ಅಡಿ ಎತ್ತರ ಮುಟ್ಟುತ್ತವೆ; 250 ಕಿಲೋ ಗ್ರಾಂಗೂ ಅಧಿಕ ತೂಗುತ್ತವೆ. ಈ ಎಲ್ಲ ವಾನರರೂ ಅಲ್ಪ ಸಂಖ್ಯೆ ತಲುಪಿವೆ. ಅವು ನೆಲೆಸಿರುವ ಪ್ರದೇಶಗಳಲ್ಲಿ ಮನುಷ್ಯರಿಂದ ಅವ್ಯಾಹತವಾಗಿ ನಡೆದಿರುವ ಅರಣ್ಯ ನಾಶ, ಕಳ್ಳ ಬೇಟೆ ಇತ್ಯಾದಿ ದೌರ್ಜನ್ಯಗಳಿಂದಾಗಿ ಅವು ತೀವ್ರ ದುಸ್ಥಿತಿಯಲ್ಲಿವೆ.

ಆದರೆ ಧರೆಯ ಈ ವರೆಗಿನ ಸಕಲ ವಾನರ ವಿಧಗಳಲ್ಲೂ ಅತ್ಯಂತ ದೈತ್ಯ ವಾನರ ವಿಧ ಗೊರಿಲ್ಲ ಅಲ್ಲ! ಆ ದಾಖಲೆಯನ್ನು ಸೃಜಿಸಿದ್ದು ಈಗ ಬಹಳ ಹಿಂದೆಯೇ ಅಳಿದುಹೋದ ಬೇರೆಯೇ ಒಂದು ವಾನರ ವಿಧ. ಅದರ ಹೆಸರು 'ಜೈಗಾಂಟೋಪಿತೀಕಸ್ ಬ್ಲಾಕಿ' (ಚಿತ್ರ 4) ಹತ್ತು ಅಡಿ ಎತ್ತರದ, 300 ಕಿಲೋ ಮೀರುವ ತೂಕದ ಪರಮ ದೈತ್ಯ ವಾನರ ಅದು! ಈ ವಾನರ ಅವತರಿಸಿದ್ದು ಈಗ್ಗೆ ಒಂದು ದಶಲಕ್ಷಕ್ಕೂ ಹೆಚ್ಚು ವರ್ಷ ಹಿಂದೆ. ಈಗಿನ ಚೀನಾ ದೇಶದ ದಕ್ಷಿಣ ಭಾಗದಲ್ಲಿ, ವಿಯೆಟ್ನಾಂನಲ್ಲಿ ಮತ್ತು ನಮ್ಮ ಭಾರತ ದೇಶದ ಕೆಲ ಭಾಗಗಳಲ್ಲಿ ಕೂಡ ಆ ಪ್ರಾಚೀನ ಕಾಲದಲ್ಲಿ ದಟ್ಟೈಸಿದ್ದ ಅಡವಿಗಳಲ್ಲಿ ಈ ವಾನರ ನೆಲೆಸಿತ್ತು. ಅಲ್ಲೆಲ್ಲ ಹೇರಳವಾಗಿ ಲಭಿಸುತ್ತಿದ್ದ ಹಣ್ಣುಗಳನ್ನು ಮತ್ತು ಕೆಲ ನಿರ್ದಿಷ್ಟ ಬಗೆಗಳ ಎಲೆಗಳು ಮತ್ತು ಗೆಡ್ಡೆಗಳನ್ನು ಸೇವಿಸುತ್ತ ಗುಂಪುಗುಂಪಾಗಿ ಅವು ಬದುಕಿದ್ದುವು. ಅದೇ ಕಾಲದಲ್ಲಿ ಧರೆಯಲ್ಲಿದ್ದ ನಮ್ಮ ಎಲ್ಲ ಪಿತಾಮಹರ, ಎಂದರೆ ಹೋಮೋ ಇರೆಕ್ಟಸ್, ಹೋಮೋ ನಿಯಾಂಡರ್ಥಾಲೆನ್ಸಿಸ್, ಹೋಮೋ ರೆಸಿಎನ್ಸಿಸ್, ಹೋಮೋ ಸೇಪಿಯನ್ಸ್ ಇತ್ಯಾದಿ ಪೂರ್ವ ಮಾನವ ಪ್ರಭೇದಗಳ, ಇಡೀ ಜನಸಂಖ್ಯೆ ಒಂದೇ ಒಂದು ಲಕ್ಷವನ್ನೂ ತಲುಪಿರಲಿಲ್ಲ!




ಹಾಗಿದ್ದೂ, ಮಹಾ ಶಕ್ತಿವಂತರಾಗಿದ್ದೂ, ಈಗಿನ ಮನುಷ್ಯರಂತಹ ಸರ್ವನಾಶಕ ಶತ್ರು ಒಂದೂ ಇರದಿದ್ದರೂ ಆ ವಾನರರು ಈಗ್ಗೆ ಒಂದು ಲಕ್ಷ ವರ್ಷ ಹಿಂದಿನ ಸುಮಾರಿಗೆ ಸಂಪೂರ್ಣ ಅಳಿದುಹೋದುವು! ಹಾಗಾದದ್ದು ಏಕೆ? ಅದಕ್ಕೆ ಮೂಲ ಕಾರಣ ಆ ವಾನರರಿಗೆ ಎದುರಾದ ಆಹಾರದ ಅಭಾವ. ಅವುಗಳ ಆಹಾರ ಅಡವಿಯಲ್ಲಿ ಲಭಿಸುತ್ತಿದ್ದ ಎಲೆ, ಹಣ್ಣುಗಳೇ ಆದರೂ ಆ ಬೃಹದ್ದೇಹಿಗಳಿಗೆ ಸಹಜವಾಗಿಯೇ ಪ್ರತಿ ದಿನವೂ ಭಾರೀ ಪ್ರಮಾಣದ ಆಹಾರ ಬೇಕಿತ್ತು. ಈಗ್ಗೆ ಒಂದು ಲಕ್ಷ ವರ್ಷಕ್ಕೂ ಸ್ವಲ್ಪ ಹಿಂದೆ ಧರೆಗೆ 'ಹಿಮ ಯುಗ' ಸದೃಶ ಪರಿಸ್ಥಿತಿ ಕಾಲಿಟ್ಟಿತ್ತು. ತತ್ಪರಿಣಾಮವಾಗಿ ಅತಿ ಶೀತವನ್ನು ಎದುರಿಸಲಾಗದೆ ಆಗಿನ ಅಡವಿಗಳೆಲ್ಲ ಕ್ಷಿಪ್ರವಾಗಿ ಕಣ್ಮರೆಯಾಗತೊಡಗಿದುವು. ಹಾಗಾಗಿ ಜೈಗಾಂಟೋ ಪಿಥೀಕಸ್‌ಗಳಿಗೆಲ್ಲ ಆಹಾರ ಸಿಗದಂತಾಯಿತು. ಬೇರಾವ ಆಹಾರ ಕ್ರಮಕ್ಕೂ ಹೊಂದಿಕೊಳ್ಳಲಾಗದೆ ಆ ದೈತ್ಯ ವಾನರರೆಲ್ಲ ಸಂಪೂರ್ಣ ನಿರ್ನಾಮವಾದುವು! ಎಂಥ ದುರಂತ!

■ **ಎನ್. ವಾಸುದೇವ್**